**Q.P. Code – 50126**

## ಪ್ರಥಮ ಬಿ.ಎ. ಪದವಿ ಪರೀಕ್ಷೆ, ಅಕ್ಟೋಬರ್/ನವೆಂಬರ್ 2016

## (ದೂರ ಶಿಕ್ಷಣ)

## ಕನ್ನಡ ಐಚ್ಛಿಕ ಪತ್ರಿಕೆ – ೧

## (DAA 430) – ಕನ್ನಡ ಸಾಹಿತ್ಯ ಚರಿತ್ರೆ

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 70/80*

1. **ಮೂರು** ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ ಬರೆಯಿರಿ : **3 × 10 = 30**

(೧) ಕನ್ನಡ ಸಾಹಿತ್ಯ ಚರಿತ್ರೆಯ ವಿಭಾಗ ಕ್ರಮಗಳನ್ನು ಸವಿವರವಾಗಿ ಚರ್ಚಿಸಿ.

(೨) ರತ್ನತ್ರಯರು ಯಾರು? ಇಬ್ಬರು ಕವಿಗಳನ್ನು ಕೃತಿಗಳೊಂದಿಗೆ ಪರಿಚಯ ಮಾಡಿ ಕೊಡಿ.

(೩) ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಡ್ಡಾರಾಧನೆ ಕೃತಿಯ ಮಹತ್ವವನ್ನು ವಿಶ್ಲೇಷಿಸಿ.

(೪) ದಾಸ ಸಾಹಿತ್ಯದ ಸ್ವರೂಪವನ್ನು ಪುರಂದರದಾಸ ಮತ್ತು ಕನಕದಾಸರ ಬರವಣಿಗೆಯ ಹಿನ್ನೆಲೆಯಲ್ಲಿ ಪುಷ್ಟೀಕರಿಸಿ.

(೫) ಹೊಸಗನ್ನಡ ಸಾಹಿತ್ಯದ ಮುಖ್ಯ ಕಾಲಘಟ್ಟಗಳನ್ನು ಕುರಿತು ಬರೆಯಿರಿ.

(೬) ಬೇಂದ್ರೆಯವರ ಬದುಕು ಮತ್ತು ಕಾವ್ಯ ದರ್ಶನವನ್ನು ವಿವರಿಸಿ.

2. **ಮೂರು** ಕವಿಗಳ ಕುರಿತು ಟಿಪ್ಪಣಿ ಬರೆಯಿರಿ : **3 × 5 = 15**

(೧) ದುರ್ಗಸಿಂಹ

(೨) ಬ್ರಹ್ಮಶಿವ

(೩) ದೇವರ ದಾಸಿಮಯ್ಯ

(೪) ಸಿದ್ಧರಾಮ

(೫) ಸರ್ವಜ್ಞ

3. **ಮೂರು** ಕವಿಗಳ ಕುರಿತು ಟಿಪ್ಪಣಿ ಬರೆಯಿರಿ : **3 × 5 = 15**

(೧) ಮುದ್ದಣ

(೨) ಬಿ.ಎಂ. ಶ್ರೀ

(೩) ಕುವೆಂಪು

(೪) ವಿ.ಕೃ. ಗೋಕಾಕ್

(೫) ದೇವನೂರು ಮಹಾದೇವ



https://www.kuvempuonline.com/

4. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ : **10 × 1 = 10**

(೧) ಕನ್ನಡದ ಮೊದಲ ಲಾಕ್ಷಣಿಕ ಗ್ರಂಥ ಯಾವುದು? ಅದರ ಕಾಲವನ್ನು ತಿಳಿಸಿ.

(೨) 'ಕನ್ನಡ ಕವಿತೆಯೊಳ್ ಅಸಗಂಗಂನೂರ್ಮಡಿ' ಎಂದು ಹೇಳಿದವರಾರು?

(೩) 'ಕರ್ಣ ರಸಾಯನ ಮಲ್ತೆ ಭಾರತಂ' ಎಂದು ಉದ್ಗಾರವೆತ್ತಿದ ಕವಿ ಯಾರು?

(೪) 'ಬಲೆ ದೃಷ್ಟಿಗೆ ವಜ್ರದ ಸಂಕೋಲೆ' ಈ ಸಾಲು ಯಾವ ಕಾವ್ಯದಲ್ಲಿ ಮೂಡಿ ಬಂದಿದೆ?

(೫) "ಜ್ವರವಿಡಿದ ಬಾಯಿಗೆ ನೊರೆವಾಲು ಒಲಿವುದೇ."..... ಇದು ಯಾರ ವಚನದ ಸಾಲು?

(೬) "ಪ್ರಭುಲಿಂಗ ಲೀಲೆ" ಕೃತಿಯ ಕರ್ತೃ ಯಾರು?

(೭) "ಕವಿ ಚೂಪವನ ಚೈತ್ರ" ಬಿರುದಾಂಕಿತ ಕವಿ ಯಾರು?

(೮) ಹೊಸಗನ್ನಡ ಸಾಹಿತ್ಯದ ಮುಂಗೋಳಿ ಎಂದು ಯಾರನ್ನು ಕರೆಯುತ್ತಾರೆ?

(೯) ಕರ್ನಾಟಕದ 'ಆಚಾರ್ಯ ಪುರುಷ' ಎಂದು ಪ್ರಖ್ಯಾತರಾದ ಕವಿಯ ಹೆಸರೇನು?

(೧೦) "ನಾನು ನವ್ಯರಿಗೆ ಕಿರಿತಮ್ಮ, ಬಂಡಾಯದವರಿಗೆ ಹಿರಿಯಣ್ಣ" ಎಂದು ಹೇಳಿದವರಾರು? ಹೇಳಿ.

5. ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ : **1 × 10 = 10**

(**80** ಅಂಕಗಳ ಸ್ಕೀಮ್‌ನವರಿಗೆ **ಕಡ್ಡಾಯ** ಪ್ರಶ್ನೆ) :

(೧) 'ಕುಮಾರವ್ಯಾಸ ಭಾರತ' ಕೃಷ್ಣ ಚರಿತಾಮೃತ ಎಂಬುದನ್ನು ನಿರೂಪಿಸಿ.

ಅಥವಾ

ಕನ್ನಡ ಸಾರಸ್ವತ ಲೋಕಕ್ಕೆ ಮುದ್ದಣ ಕವಿ ನೀಡಿರುವ ಕೊಡುಗೆಯನ್ನು ವಿವರಿಸಿ.



https://www.kuvempuonline.com/